## Third National Evaluation of KGBV –Karnataka

ದಿನಾಂಕ: 05.12.2013ರಂದು ನವದೆಹಲಿಯNCERTಯಲ್ಲಿಕಸ್ತೂರ ಬಾ ಗಾಂಧಿ ವಿದ್ಯಾಲಯಗಳ ಮೌಲ್ಯಮಾಪನWrap up Meetingನಲ್ಲಿ ಚರ್ಚಿಸಿದ ಅಂಶಗಳನ್ನು ಮಂಡಿಸಲಾಗಿದೆ.

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ. ಭಟ್ಟಚಾರ್ಯ. ಕಾರ್ಯದರ್ಶಿಗಳು, MHRD
2. ಶ್ರೀಮತಿ. ವೃಂದಾ ಸ್ವರೂಪ್, ಹೆಚ್ಚುವರಿ ಕಾರ್ಯದರ್ಶಿಗಳು,MHRD
3. ಶ್ರೀಮತಿ. ವಿಮಲ ರಾಮಚಂದ್ರEvaluation mission leader
4. ಶ್ರೀಮತಿ. ಮನಿಂದರ್‌ಕೌರ್ ದ್ವಿವೇದಿ, Director MHRD
5. ರಾಷ್ಟ್ರೀಯ ಮೌಲ್ಯಮಾಪನತಂಡದ ಸದಸ್ಯರು (NationalEvaluationDraft Report Members)
    - ಶ್ರೀಮತಿ. ದೀಪ
    - ಶ್ರೀಮತಿ. ಊರ್ವಶಿ
    - ಶ್ರೀಮತಿ.ಸ್ಮಿತಾ

ಮೊದಲನೆಯದಾಗಿEvaluation mission leaderಶ್ರೀಮತಿ.ವಿಮಲ ರಾಮಚಂದ್ರರವರುNational Draft reportನ ಅಂಶಗಳ ಬಗ್ಗೆ ಚರ್ಚಿಸಿದರು.

- ಕೆಜಿಬಿವಿ ವಿದ್ಯಾರ್ಥಿನಿಯರ ಭದ್ರತೆ ಮತ್ತು ಸುರಕ್ಷತೆಅತ್ಯಾಧ್ಯತೆ ನೀಡಬೇಕು.
- ಯಾವುದೇ ಪುರುಷ ವ್ಯಕ್ತಿಗಳು ಕೆಜಿಬಿವಿಗಳಲ್ಲಿ ವಾಸಮಾಡುವ ಅವಕಾಶ ನೀಡಬಾರದು (ಚೌಕಿದಾರ್ ಸೇರಿದಂತೆ)
- ಪೌಷ್ಟಿಕಾಂಶಯುಕ್ತಆಹಾರ ಮತ್ತುSanitationಗೇ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕುಆಹಾರಕ್ಕೆ ನೀಡುವ ರೂ.900ಗಳನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕು.
- ಕೆಜಿಬಿವಿ ವಸತಿ ಶಾಲೆಗಳುRTE Normsಗೆ ಬದ್ಧವಾಗಿರಬೇಕು.
- ದಾಖಲಾತಿ ನಿಯಮಗಳನ್ನು ಕಡ್ಡಾಯವಾಗಿಪಾಲಿಸಬೇಕು. KGBVಗಳಲ್ಲಿ CWSN ಮಕ್ಕಳಿಗೆ ಅವಕಾಶ ನೀಡಬೇಕು.
- ವಿದ್ಯಾರ್ಥಿವೇತನವಿದ್ಯಾರ್ಥಿಗಳಿಗೆ ಅಂಚೆ ಖಾತೆ/ಬ್ಯಾಂಕ್‌ಖಾತೆತೆರೆದು ನೀಡಬಹುದುಅಥವಾ ವೈಯಕ್ತಿಕ ಬಳಕೆಗೆ ನೀಡಬೇಕು.
- ಕೆಜಿಬಿವಿಗಳ fund flow ಬಗ್ಗೆ ಮಾತನಾಡಿದರು.ಕೆಲವು ರಾಜ್ಯಗಳಲ್ಲಿ ಜಿಲ್ಲಾ ಕಚೇರಿಗಳ ಮೂಲಕ ಕೆಜಿಬಿವಿಗಳಿಗೆ ಬಿಡುಗಡೆ ಮಾಡಿದ್ದಾರೆ. ಕೆಲವು ರಾಜ್ಯಗಳಲ್ಲಿ ನೇರವಾಗಿರಾಜ್ಯಕಛೇರಿಯಿಂದ ಕೆಜಿಬಿವಿಗಳಿಗೆ ಬಿಡುಗಡೆ ಮಾಡಿದ್ದಾರೆ.
- ಕನಿಷ್ಠ ಇಬ್ಬರು ಸದಸ್ಯರುಕೆಜಿಬಿವಿ ಖಾತೆಯನ್ನುಅಪರೇಟ್ ಮಾಡಬೇಕು.
- ಬಿಪಿಎಲ್–ವರ್ಗದ ಬಗ್ಗೆ ಸ್ಪಷ್ಟವಾದClarity ಇರಬೇಕು.
- ಕೆಜಿಬಿವಿಗಳಲ್ಲಿ ವಲಸೆಹೋಗುವ ಮಕ್ಕಳಿಗೆ ಅವಕಾಶ ನೀಡಬೇಕು.
- ಕೆಜಿಬಿವಿಗಳಲ್ಲಿ ಡ್ರಾಪ್‌ಔಟ್ ಮಕ್ಕಳ ರಿಜಿಸ್ಟಾರ್ ನಿರ್ವಹಿಸಬೇಕು.
- ಕೆಜಿಬಿವಿ ಶಿಕ್ಷಕರಿಗೆ/ಸಿಬ್ಬಂದಿ ವರ್ಗದವರಿಗೆ ವಿಶೇಷ ತರಬೇತಿ ನೀಡಬೇಕು. ಸೇತುಬಂಧಮುಂತಾದ ತರಬೇತಿಗಳಲ್ಲಿ ಡಯಟ್‌ಗಳನ್ನುಸಮರ್ಪಕವಾಗಿ ಬಳಸಿಕೊಳ್ಳಬೇಕು. RMSA ಜೊತೆ ಲಿಂಕೇಜ್ ಪ್ರಬಲಗೊಳಿಸಬೇಕು.
- NRHMಸಂಬಂಧದುರ್ಬಲವಾಗಿದೆ.ಜಿಲ್ಲಾ/ಬ್ಲಾಕ್ ಹಂತಗಳಲ್ಲಿ ಪ್ರಬಲಗೊಳಿಸಬೇಕು.
- SDMC ಗಳಲ್ಲಿ 50% ಮಹಿಳೆಯರಿಗೆ ಅವಕಾಶ ಒದಗಿಸಬೇಕು.
- ಇಲಾಖೆಅಧಿಕಾರಿಗಳು ಮಕ್ಕಳು ವಾಸಿಸುವ ಕೊಠಡಿಗೆಅನಿರ್ಬಂಧಿತವಾಗಿಪ್ರವೇಶ ನೀಡಬಾರದು.
- ಕೆಜಿಬಿವಿಗಳಲ್ಲಿ ಸಂಬಂಧಿಸಿದ ಎಲ್ಲಾ ವಹಿಗಳನ್ನು ಉತ್ತಮವಾಗಿನಿರ್ವಹಿಸಬೇಕು.

- KGBVಗಳಿಗೆ ಸಂಬಂಧಿಸಿದ workshop (including MS Karnataka)ಕಾಲಕಾಲಕ್ಕೆ ನಡೆಸಬೇಕು
- Convergence ಇತರೇ ಇಲಾಖೆಗಳೊಂದಿಗೆ ಉತ್ತಮಪಡಿಸಿಕೊಳ್ಳಬೇಕು.
- ಪ್ರತ್ಯೇಕU-Dise
- ಕಾಲಕಾಲಕ್ಕೆ Audit
- Safety &Securityಗೆಆದ್ಯತೆ ನೀಡಬೇಕು.
- Gender sensitization Training ನೀಡಬೇಕು.
- Solar ವಿದ್ಯುತ್‌ಗೆ ಪ್ರಾಮುಖ್ಯತೆ ನೀಡಬೇಕು.
- DIETಗಳ Actionreachನಲ್ಲಿ KGBVಗಳ ಅಂಶಗಳನ್ನು ಸೇರಿಸುವುದು.

**II ನಂತರ ಪ್ರತಿಯೊಂದುರಾಜ್ಯದEvaluation Draft reportಗಳ ಬಗ್ಗೆ ಚರ್ಚಿಸಲಾಯಿತು.ರಿಪೋರ್ಟ್‌ಗಳ ಬಗ್ಗೆ ರಾಜ್ಯ ಸರ್ಕಾರಗಳ Commentsಗಳನ್ನು ಚರ್ಚಿಸಿದರು.**

**IIIಮಾನ್ಯ ಕಾರ್ಯದರ್ಶಿಗಳು,MHRDರವರಪ್ರಮುಖತೀರ್ಮಾನಗಳು:**

- ಎಲ್ಲಾ ರಾಜ್ಯಗಳು Evaluation reportಗಳ ಮೇಲೆ ರಾಜ್ಯಗಳ ಹಂತದಲ್ಲಿ ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ವಿಳಂಬ ಮಾಡದೇಕೂಡಲೇ ಕೈಗೊಳ್ಳಬೇಕು ಎಂದು ಸೂಚಿಸಿದರು.
- ರಾಜ್ಯ ಸರ್ಕಾರದ ಶಿಕ್ಷಣ ಕಾರ್ಯದರ್ಶಿಗಳು/ಮೇಲಾಧಿಕಾರಿಗಳು ಜಿಲ್ಲಾ ಅಧಿಕಾರಿಗಳೊಂದಿಗೆ ಕೆಜಿಬಿವಿ ಅಂಶಗಳಿಗೆ ಸಂಬಂಧಿಸಿದಂತೆ ನಿರಂತರ ಸಂಪರ್ಕ ಹೊಂದಿರಬೇಕು. ವಿಡಿಯೋ ಕಾನ್ಫರೆನ್ಸ್‌ಗಳಲ್ಲಿ ಕೆಜಿಬಿವಿ ಅಂಶಗಳಿಗೆ ಅವಕಾಶ ನೀಡಬೇಕು.
- NationalEvaluationಗೇ ಸಂಬಂಧಿಸಿದಂತೆ ರಾಜ್ಯಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಡಿಸೆಂಬರ್/ಜನವರಿ ತಿಂಗಳಿನಿಂದ ವಿಡಿಯೋಕಾನ್ಫರೆನ್ಸ್‌ಅನ್ನುMHRDಯಿಂದ ವಲಯವಾರು ನಡೆಸಲಾಗುವುದು.
- ಭದ್ರತೆ ಮತ್ತು ಸುರಕ್ಷತೆಗೆತಮ್ಮದೇಆದGuidelines ಹೊಂದಿರಬೇಕು.
- ಪುರುಷ ವ್ಯಕ್ತಿಗಳು ಕೆಜಿಬಿವಿಗಳಲ್ಲಿ ವಾಸಮಾಡಲು/ಯಾವುದೇಕಾರಣಕ್ಕೂಅವಕಾಶ ನೀಡಬಾರದು. ಕೆಜಿಬಿವಿಗಳಲ್ಲಿ ಸ್ವೇಚ್ಛಾಚಾರವಾಗಿಯಾರಿಗೂ ಪ್ರವೇಶ ಮಾಡಲು ಅವಕಾಶ ನೀಡಬಾರದು.
- ಕೆಜಿಬಿವಿಗಳ ಅಕ್ಕಪಕ್ಕ ಕ್ಲಬ್/ಬಾರ್‌ಗಳು ಇದ್ದರೆನಿಯಮಾನುಸಾರತೆರವುಗೊಳಿಸಲು ಕ್ರಮಕೈಗೊಳ್ಳಬೇಕು.
- ಪೌಷ್ಟಿಕಾಂಶಯುಕ್ತಆಹಾರಹಾಗೂಎಲ್ಲಾ ಸೌಲಭ್ಯಗಳನ್ನು ನೀಡಬೇಕು.
- ದಾಖಲಾತಿ ನಿಯಮಗಳ ಕಟ್ಟುನಿಟ್ಟು ಪಾಲಿಸಬೇಕು U-Dise Dataಉಪಯೋಗಿಸಿಕೊಳ್ಳಬೇಕು.
- KGBVಗಳಿಗೆ ಸಂಬಂಧಿಸಿದಂತೆ RMSAಜೊತೆಉತ್ತಮlinkageಹೊಂದಿರಬೇಕು.
- CWSN& Minority ಮಕ್ಕಳಿಗೆ ಅವಕಾಶ ನೀಡಬೇಕು.
- Dropout Register ನಿರ್ವಹಿಸಬೇಕು.
- Records Standardizeಮಾಡಬೇಕು.
- Funding Process ಉತ್ತಮವಾಗಿರಬೇಕು.
- ರಾಜ್ಯಗಳು ಪ್ರತ್ಯೇಕವಾಗಿಅವರದೇಆದEvaluation System ಹೊಂದಿರಬೇಕು.

[ಪಿ. ಜಯಪ್ರಕಾಶ್]
ಕಾರ್ಯಕ್ರಮಾಧಿಕಾರಿ
ಸರ್ವ ಶಿಕ್ಷಣ ಅಭಿಯಾನ

ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

ಸಂಖ್ಯೆ:ಸ.ಶಿ.ಅ/ಹೆ.ಮ.ಶಿ/ಕಾರ್ಯಗಾರ.ಎಂ.ಹೆಚ್.ಆರ್.ಡಿ/2013–14 ದಿನಾಂಕ: 16.12.2013

**ಸುತ್ತೋಲೆ**

ವಿಷಯ: ಕೆಜಿಬಿವಿ/ಕೆಕೆಜಿಬಿವಿ ವಸತಿಶಾಲೆಗಳಲ್ಲಿ ಮೂಲಭೂತ ಸೌಕರ್ಯ, ಭದ್ರತೆ ಹಾಗೂ ಸುರಕ್ಷತೆಯನ್ನುಒದಗಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಪತ್ರ ಸಂಖ್ಯೆ: ಸಶಿಅ/ಹೆ.ಮ.ಶಿ/ಕೆಜಿಬಿವಿ/ಏ.ಆ/13–14ದಿ: 07.05.13.
2. ಈ ಕಛೇರಿ ಪತ್ರ ಸಂಖ್ಯೆ: ಸಶಿಅ/ಕೆಜಿಬಿವಿ/163/2012–13. ದಿ: 31.01.13
3. ಈ ಕಛೇರಿ ಪತ್ರ ಸಂಖ್ಯೆ: ಸಶಿಅ/ಹೆ.ಮ.ಶಿ/ಕೆಜಿಬಿವಿ/ಮಾ.ಸೂ/13–14 ದಿ: 03.09.13
4. ರಾಜ್ಯಯೋಜನಾ ನಿರ್ದೇಶಕರಕಛೇರಿಯಲ್ಲಿ ನಡೆದಡಿಡಿಪಿಐ/ಡಿವೈಪಿಸಿ/ಕೆಜಿಬಿವಿ ಮುಖ್ಯ ಶಿಕ್ಷಕರು/ವಾರ್ಡನ್ ಸಭೆಗಳಲ್ಲಿ ಚರ್ಚಿಸಿ ಸೂಚಿಸಿದಂತೆ.
5. 3ನೇ ರಾಷ್ಟ್ರೀಯಕೆಜಿಬಿವಿ ಮೌಲ್ಯಮಾಪನತಂಡದ ಸದಸ್ಯರ ಶಿಫಾರಸ್ಸುಗಳಂತೆ ಮಾನ್ಯ ಕಾರ್ಯದರ್ಶಿಗಳು/ಹೆಚ್ಚುವರಿ ಕಾರ್ಯದರ್ಶಿಗಳು ಎಂ.ಹೆಚ್.ಆರ್.ಡಿರವರ ಸಭಾ ನಡವಳಿ ದಿನಾಂಕ: 05.12.2013 ರಂತೆ

*******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ಅನುಸಾರ,ಕೆ.ಜಿ.ಬಿ.ವಿ ಮತ್ತುಕೆ.ಕೆ.ಜಿ.ಬಿ.ವಿ ವಸತಿ ಶಾಲೆಗಳಲ್ಲಿ ಭದ್ರತೆ ಮತ್ತು ಸುರಕ್ಷತೆಯನ್ನುಒದಗಿಸಲು ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಮೇಲ್ಕಂಡ ಉಲ್ಲೇಖಗಳಲ್ಲಿ ಈಗಾಗಲೇ ಸೂಚಿಸಲಾಗಿದೆ. ಮುಂದುವರೆದುಉಲ್ಲೇಖ(5)ರಂತೆ3ನೇ ರಾಷ್ಟ್ರೀಯಕೆಜಿಬಿವಿ ಮೌಲ್ಯಮಾಪನತಂಡದ ಸದಸ್ಯರ ಶಿಫಾರಸ್ಸುಗಳಂತೆ ಮಾನ್ಯ ಕಾರ್ಯದರ್ಶಿಗಳು/ಹೆಚ್ಚುವರಿ ಕಾರ್ಯದರ್ಶಿಗಳು ಎಂ.ಹೆಚ್.ಆರ್.ಡಿರವರಸಭಾ ನಡವಳಿ ದಿನಾಂಕ: 05.12.2013ರಲ್ಲಿನ ತೀರ್ಮಾನದಂತೆ ಈ ಕೆಳಕಂಡಂತೆ ಕ್ರಮಗಳನ್ನು ಕಡ್ಡಾಯವಾಗಿವಿಳಂಬಮಾಡದೇಕೈಗೊಳ್ಳಲು ಸೂಚಿಸಿದೆ.

- ಕೆ.ಜಿ.ಬಿವಿ ಮತ್ತುಕೆ.ಕೆ.ಜಿ.ಬಿ.ವಿ ಗಳಲ್ಲಿ ವಿದ್ಯಾರ್ಥಿಗಳ ಭದ್ರತೆ ಮತ್ತು ಸುರಕ್ಷತೆಗೆಅತ್ಯಾದ್ಯತೆ ನೀಡಬೇಕು.
- ಯಾವುದೇಪುರುಷ ವ್ಯಕ್ತಿಗಳು ಕೆಜಿಬಿವಿಗಳಲ್ಲಿ ವಾಸಮಾಡಲುಯಾವುದೇಕಾರಣಕ್ಕೂ ಅವಕಾಶ ನೀಡಬಾರದು.
- ಕೆ.ಜಿ.ಬಿ.ವಿ / ಕೆ.ಕೆ.ಜಿ.ಬಿ.ವಿ ವಸತಿ ನಿಲಯಗಳಿಗೆಸ್ವೇಚ್ಛಾಚಾರವಾಗಿ(ಅಧಿಕಾರಿಗಳು ಸೇರಿದಂತೆ)ಯಾರಿಗೂ ಪ್ರವೇಶ ಮಾಡಲು ಅವಕಾಶ ನೀಡಬಾರದು.
- ಕೆಜಿಬಿವಿಗಳ ಅಕ್ಕಪಕ್ಕ ಕ್ಲಬ್/ಬಾರ್‌ಗಳು ಇದ್ದ ಪಕ್ಷದಲ್ಲಿನಿಯಮಾನುಸಾರ ತೆರವುಗೊಳಿಸಲು ಕ್ರಮಕೈಗೊಳ್ಳಬೇಕು.
- ಆಹಾರ ಪೂರೈಕೆಗಾಗಿ ನಿಗದಿಪಡಿಸಿರುವ ಮಾಸಿಕ ರೂ.900/–ಗಳ ಪೂರ್ಣ ಮೊತ್ತದಲ್ಲಿಪೌಷ್ಟಿಕಾಂಶಯುಕ್ತಆಹಾರ ನೀಡಬೇಕು (ಕೆ.ಕೆ.ಜಿ.ಬಿ.ವಿ ಗಳಲ್ಲಿ ರೂ.700/–)
- ಪ್ರತಿಕೆ.ಜಿ.ಬಿ.ವಿ ಶಾಲೆ ಪ್ರತ್ಯೇಕU-Diseಶಾಲಾ ಕೋಡ್ ಹೊಂದಿರಬೇಕು.
- U-Dise Dataವನ್ನು ಬಳಕೆ ಮಾಡಿಕೊಂಡು, ದಾಖಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
- KGBVಗಳಿಗೆ ಸಂಬಂಧಿಸಿದಂತೆ RMSAಜೊತೆಉತ್ತಮ ಸಹಯೋಗವನ್ನು(linkage)ಹೊಂದಿರಬೇಕು.
- ಕೆ.ಜಿ.ಬಿ.ವಿ ವಸತಿ ಶಾಲೆಗಳಲ್ಲಿ ಕಡ್ಡಾಯವಾಗಿಆರ್.ಟಿ.ಇ (RTE) ನಿಯಮಗಳಿಗೆ ಭದ್ಧವಾಗಿರಬೇಕು.
- CWSN& Minority ಮಕ್ಕಳಿಗೆ ವಿಶೇಷವಾಗಿ ದಾಖಲಾತಿಯಲ್ಲಿ ಅವಕಾಶ ನೀಡಬೇಕು.
- ಕೆ.ಜಿ.ಬಿ.ವಿ/ಕೆ.ಕೆ.ಜಿ.ಬಿ.ವಿವಸತಿ ಶಾಲೆಗಳಲ್ಲಿ ಶಾಲೆ ಬಿಟ್ಟ ಮಕ್ಕಳ/ವಿದ್ಯಾರ್ಥಿ ನಿಲಯ ಬಿಟ್ಟ ಮಕ್ಕಳ ವಹಿಯನ್ನು(Dropout Register) ನಿರ್ವಹಿಸಬೇಕು.

- ಕೆ.ಜಿ.ಬಿ.ವಿ ಕೈಪಿಡಿಯಲ್ಲಿ ನೀಡಿರುವ ಮಾಹಿತಿಯಂತೆಎಲ್ಲಾ ವಹಿಗಳನ್ನು ಕಡ್ಡಾಯವಾಗಿಅತ್ಯುತ್ತಮವಾಗಿನಿರ್ವಹಿಸಬೇಕು.
- ನಿಯಮಾನುಸಾರ ಕನಿಷ್ಠ ಇಬ್ಬರು(ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷರು) ಎಸ್.ಡಿ.ಎಂ.ಸಿ ಖಾತೆಯನ್ನು ನಿರ್ವಹಿಸಬೇಕು.
- ಕೆ.ಜಿ.ಬಿ.ವಿ ಶಾಲೆಗಳಲ್ಲಿ ವಲಸೆ ಹೋಗುವ ಕುಟುಂಬದ ಮಕ್ಕಳಿಗೆ ವ್ಯಾಸಂಗ ಮಾಡಲು ಅವಕಾಶ ನೀಡಬೇಕು.
- ಇಲಾಖೆಯು ನೀಡುವಎಲ್ಲಾ ತರಬೇತಿಗಳಿಗೆ ನಿಯಮಾನುಸಾರಕೆ.ಜಿ.ಬಿ.ವಿ ಶಿಕ್ಷಕರನ್ನು ನಿಯೋಜಿಸಬೇಕು.
- ಸೋಲಾರ್ ವಿದ್ಯುತ್ ಸೌಕರ್ಯಕ್ಕೆ ಪ್ರಾಮುಖ್ಯತೆ ನೀಡಬೇಕು.
- ಯಾವುದೇಕಾರಣಕ್ಕೂ ವಿದ್ಯಾರ್ಥಿನಿಯರನ್ನು ಬಯಲು ಶೌಚಾಲಯಕ್ಕೆ ಕಳುಹಿಸದಿರುವಂತೆ ಕ್ರಮಕೈಗೊಳ್ಳುವುದು.
- ಜಿಲ್ಲಾ ಹಂತದಲ್ಲಿNRHM / SABALA ಯೋಜನೆಗಳೊಂದಿಗೆ ಉತ್ತಮ ಸಹಯೋಗ ಸಾಧಿಸುವುದು.

**ಕೆ.ಜಿ.ಬಿ.ವಿ ಮತ್ತುಕೆ.ಕೆ.ಜಿ.ಬಿ.ವಿ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲುಜಿಲ್ಲಾ ಹಂತದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು:**

ಕೆ.ಜಿ.ಬಿ.ವಿ ಮತ್ತುಕೆ.ಕೆ.ಜಿ.ಬಿ.ವಿ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿಅನೇಕ ಸುತ್ತೋಲೆಗಳನ್ನು ಹಾಗೂ ಮಾನ್ಯರಾಜ್ಯಯೋಜನಾ ನಿರ್ದೇಶಕರು ಸಭೆಗಳಲ್ಲಿ ಸೂಚನೆಗಳನ್ನು ನೀಡಿದ್ದರೂ ಸಹ, ಹಲವು ಕೆ.ಜಿ.ಬಿ.ವಿ ಮತ್ತುಕೆ.ಕೆ.ಜಿ.ಬಿ.ವಿ ವಸತಿ ನಿಲಯಗಳಲ್ಲಿ ಇನ್ನುಹಲವು ಮೂಲಭೂತ ಸೌಕರ್ಯಗಳ ಕೊರತೆಇರುವುದುಕಂಡುಬಂದಿದೆ.ಆದ್ದರಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಂಡು ಮೂಲಭೂತ ಸೌಕರ್ಯಗಳನ್ನು ಆದ್ಯತೆಆಧಾರದ ಮೇಲೆ ಒದಗಿಸುವುದು.

1. ಪ್ರತಿಕೆ.ಜಿ.ವಿ.ವಿ / ಕೆ.ಕೆ.ಜಿ.ಬಿ.ವಿ ವಸತಿ ನಿಲಯಗಳಲ್ಲಿ ಅವಶ್ಯವಿರುವ ಮೂಲಭೂತ ಸೌಕರ್ಯಗಳ ಕೊರತೆಯನ್ನು ಸಿವಿಲ್ ವಿಭಾಗದ ಸಹಯೋಗದೊಂದಿಗೆ (ಶೌಚಾಲಯ, ಸ್ನಾನಗೃಹ, ಕಾಂಪೌಂಡು, ಕಟ್ಟಡ ದುರಸ್ಥಿ, ಕಿಟಿಕಿ ಬಾಗಿಲು ದುರಸ್ಥಿ, ಕುಡಿಯುವ ನೀರು, ವಿದ್ಯುತ್ಶಕ್ತಿಇತ್ಯಾದಿ)ಪಟ್ಟಿ ಮಾಡಬೇಕು.
2. ಈ ಮೇಲ್ಕಂಡ ಅಂಶಗಳಿಗೆ ಅಂದಾಜುಆಯ-ವ್ಯಯ ಮತ್ತುಯೋಜನೆಯನ್ನು ಸಿದ್ಧಪಡಿಸಿ, ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ / ಪಟ್ಟಣ ಪಂಚಾಯತ್/ ಗ್ರಾಮ ಪಂಚಾಯತಿ ಮುಂತಾದ ಇಲಾಖೆಗಳ ಸಹಯೋಗದೊಂದಿಗೆ ಸದರಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
3. ಸದರಿಉದ್ದೇಶಕ್ಕಾಗಿರಾಜ್ಯಕಚೇರಿಯಿಂದ ನಿಗದಿಪಡಿಸಿರುವ ಅನುದಾನವನ್ನು ನಿಯಮಾನಸಾರ ಪೂರ್ಣಪ್ರಮಾಣದಲ್ಲಿ ಬಳಸಿಕೊಂಡು ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

ಈ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯದಕೊರತೆಕಂಡುಬಂದಲ್ಲಿ, ಭದ್ರತೆ ಮತ್ತು ಸುರಕ್ಷತೆಕಾಪಾಡುವಲ್ಲಿ ನಿರ್ಲಕ್ಷ್ಯತೋರಿದಲ್ಲಿಜಿಲ್ಲಾ ಹಂತದ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ನಿರ್ದೇಶಕರು(ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು

ಪ್ರತಿ ಮುಂದಿನ ಕ್ರಮಕ್ಕಾಗಿ:

1. ಉಪನಿರ್ದೇಶಕರು (ಆಡಳಿತ), ಸರ್ವ ಶಿಕ್ಷಣ ಅಭಿಯಾನ, ಸಂಬಂಧಿಸಿದ ಜಿಲ್ಲೆಗಳಿಗೆ
2. ಉಪನಿರ್ದೇಶಕರು (ಆಡಳಿತ) ರವರ ಮೂಲಕ ಡಿ.ವೈ.ಪಿ.ಡಿ/ಬಿ.ಇ.ಓ ಹಾಗೂ ಸಂಬಂಧಿಸಿದ ಮುಖ್ಯ ಶಿಕ್ಷಕರಿಗೆ
3. ಅಪರಆಯುಕ್ತರು, ಧಾರವಾಡ ಮತ್ತುಗುಲ್ಬರ್ಗರವರ ಅವಗಾಹನೆಗಾಗಿ
4. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಆಪ್ತ ಶಾಖೆಗೆ, ಮಾನ್ಯರೆ ಅವಗಾಹನೆಗೆ ತರಲು
5. ಮಾನ್ಯಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಆಪ್ತ ಶಾಖೆಗೆ ಮಾನ್ಯರ ಅವಗಾಹನೆಗೆ ತರಲು